**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 106/2016**

ಸಿಡಬ್ಲ್ಯೂಃ 7

ಪಿಡಬ್ಲ್ಯೂಃ 5

| | | |
|---|---|---|
| ಸಾಕ್ಷಿಯ ಹೆಸರು | : | ಯಲ್ಲಪ್ಪ ಅಬ್ಬಿಗೇರಿ |
| ತಂದೆಯ ಹೆಸರು | : | ಸತ್ಯಪ್ಪ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಹೆಚ್.ಜಿ-757 |
| ವಾಸಸ್ಥಳ | : | ರಟ್ಟಿಹಳ್ಳಿ |

ಇಂದು ದಿನಾಂಕಃ 19.02.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ನಾನು 2014 ರಿಂದ ಇಲ್ಲಿಯವರೆಗೆ ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 25/02/2016 ರಂದು ಬೆಳಿಗ್ಗೆ 6-30 ಗಂಟೆ ಸಮಯಕ್ಕೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಹಾಜರಾಗಿ ಗಣಕೀಕೃತ ಪಿರ್ಯಾದಿ, ಒಂದು ಮರಳು ತುಂಬಿದ ಟ್ರಾಕ್ಟರ್ ಹಾಗೂ ಪಂಚನಾಮೆಯನ್ನು ನೀಡಿದ್ದು, ಅದನ್ನು ಸ್ವೀಕರಿಸಿ, ಠಾಣಾ ಅಪರಾದ ಸಂಖ್ಯೆಃ 40/2016 ರಂತೆ ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ಹಾಗೂ ಮೂಲ ಪಿರ್ಯಾದನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಂತರ 1 ನೇ ಆರೋಪಿಯ

ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ವಾಹನದ ಮಾಲೀಕ ಹಸನಸಾಬ್ ಇಟಗಿ, ವಾಹನಕ್ಕೆ ಮರಳನ್ನು ತುಂಬಲು ಬಂದಿದ್ದ ಸುಭಾನ್‌ಸಾಬ, ಅಬ್ದುಲ್ ಸಾಬ ಮತ್ತು ದಾದಾಪೀರ್ ಸಾಬರವರು ಸಹ ರೇಡ್ ಆದ ಕಾಲಕ್ಕೆ ಇದ್ದು, ಸ್ಥಳದಿಂದ ಓಡಿ ಹೋದರು ಎಂದು ಹೇಳಿರುತ್ತಾರೆ. ಮುಂದುವರೆದು ಆರೋಪಿ 1 ರವರ ಸ್ವ ಇಚ್ಛಾ ಹೇಳಿಕೆಯಲ್ಲಿ ಬೈರನಪಾದ ಹತ್ತಿರ ಇರುವ ತುಂಗಭದ್ರಾ ನದಿಯಿಂದ ಮರಳನ್ನು ಆರೋಪಿ 2 ರವರ ನಿರ್ದೇಶನದ ಮೇರೆಗೆ ತುಂಬಿಕೊಂಡು ಬರುತ್ತಿದ್ದೇವು ಎಂದು ನುಡಿದಿರುತ್ತಾರೆ. ನಂತರ ಜಪ್ತಾದ ವಸ್ತುಗಳ ಕುರಿತು ಮಾನ್ಯ ನ್ಯಾಯಾಲಯಕ್ಕೆ ಪಿ.ಎಫ್ ಭರಾಯಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿ 1 ರವರನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ದಿನಾಂಕಃ 08/03/2016 ರಂದು ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿರುತ್ತಾರೆ. ಸದರಿ ಕಾಲಕ್ಕೆ ಚಾಸಾ-1 ಮತ್ತು 4 ರಿಂದ 6 ರವರ ಮೂಲಕ ಆರೋಪಿತರನ್ನು ಗುರುತಿಸಿ, ಅವರ ಮರು ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಸದರಿ ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಈ ಪ್ರಕರಣದಲ್ಲಿ ಜಪ್ತಾದ ಮರಳನ್ನು ದಿನಾಂಕಃ 29/03/2016 ರಂದು ಪಿ.ಡಬ್ಲ್ಯೂ.ಡಿ ಇಲಾಖೆಯವರಿಗೆ ವರ್ಗಾಯಿಸಲು ಯಾದಿ ಬರೆದುಕೊಂಡು, ಕಳುಹಿಸಿದ್ದು, ಸದರಿಯವರು ದಿನಾಂಕಃ 31/03/2016 ರಂದು ಸ್ವೀಕರಿಸಿ, ಟ್ರಾಕ್ಟರ್ ಮತ್ತು ಟ್ರೇಲರ್ ಗಳನ್ನು ನಮಗೆ ವಾಪಸ್ಸು ಕಳುಹಿಸಿರುತ್ತಾರೆ. ಅದೇ ದಿನ ಮಾನ್ಯ ನ್ಯಾಯಾಲಯದ ಆದೇಶದಂತೆ ಜಪ್ತಾದ ಟ್ರಾಕ್ಟರ್ ಮತ್ತು ಟ್ರೇಲರ್ ನ್ನು ಆರೋಪಿ 2 ರವರಿಂದ ವಾಹನಕ್ಕೆ ಸಂಬಂಧಿಸಿದ ದಾಖಲಾತಿ ಪರಿಶೀಲಿಸಿ ಬಿಡುಗಡೆ ಮಾಡಿರುತ್ತೇನೆ. ಅದೇ ಕಾಲಕ್ಕೆ ಫೋಟೋಗಳನ್ನು ತೆಗೆದಿರುತ್ತೇನೆ. ನಂತರ ಕಡತವನ್ನು ಪರಿಶೀಲಿಸಲಾಗಿ ಆರೋಪಿತರ ವಿರುದ್ಧ ಸೂಕ್ತ ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನನ್ನ ತನಿಖಾ ಅವಧಿಯಲ್ಲಿ ಆರೋಪಿತರು ನದಿಯಿಂದ ಸರ್ಕಾರಿ ಸ್ವತ್ತಾದ ಮರಳನ್ನು ಸಾಗಿಸಲು ಯಾವುದೇ ಪರವಾನಿಗೆ ಅಥವಾ ಪಾಸ್ ಇಲ್ಲದೇ ಇರುವುದು ಕಂಡು ಬಂದಿರುತ್ತದೆ. ಸಾಕ್ಷಿಯು ನಿಪಿ-2 ಮತ್ತು 3 ಹಾಗೂ ಅವುಗಳ ಮೇಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-2(ಬಿ) ಮತ್ತು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಿಂದ ನಿಪಿ-8 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಈಗ ಆರೋಪಿ 2 ರವರು ವಾಹನ ಬಿಡುಗಡೆ ಸಮಯದಲ್ಲಿ ಹಾಜರುಪಡಿಸಿದ ಆರ್.ಸಿ ಪ್ರತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-9 ಮತ್ತು ನಿಪಿ-

10 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿ 1 ರವರ ಸ್ವ ಇಚ್ಛಾ ಹೇಳಿಕೆ ಹಾಗೂ ಆರೋಪಿಯ ಸಹಿ ಹಾಗೂ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11 ಎಂದು, ಆರೋಪಿಯ ಸಹಿ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಮತ್ತು ನಿಪಿ-11(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿನಾಂಕಃ 29/03/2016 ರಂದು ಪಿ.ಡಬ್ಲ್ಯೂಡಿ ಇಲಾಖೆಯವರಿಗೆ ಜಪ್ತಾದ ಮರಳನ್ನು ವರ್ಗಾಯಿಸಿದ ಕುರಿತು ಪತ್ರ ಹಾಗೂ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದ, ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯನ್ನು ದಿನಾಂಕಃ 31/03/2016 ರಂದು ಪಿ.ಡಬ್ಲ್ಯೂಡಿ ಇಲಾಖೆಯವರು ಮರಳನ್ನು ಸ್ವೀಕರಿಸಿದ ಬಗ್ಗೆ ಹಿಂಬರಹ ಮಾಡಿರುತ್ತಾರೆ. ಸಾಕ್ಷಿಯು ನಿಪಿ-1 ನ್ನು ನೋಡಿ ಗುರುತಿಸಿ, ಸದರಿ ದಾಖಲಾತಿಯನ್ನು ಚಾಸಾ-1 ರವರು ಪಿರ್ಯಾದಿಯೊಂದಿಗೆ ನೀಡಿರುತ್ತಾರೆ ಎಂ ದು ನುಡಿಯುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಜಿ.ಎಸ್.ಎಮ್ ವಕೀಲರಿಂದಃ

ನಿಪಿ-1 ನ್ನು ಬರೆದ ವ್ಯಕ್ತಿಯನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ, ಆ ರೀತಿ ಸಾಕ್ಷಿದಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ-11 ರಲ್ಲಿ ಈಗ ತಾವು ನನ್ನ ಸಂಗಡ ಬಂದರೆ ಮರಳು ತುಂಬಿದ ಜಾಗೆ ತೋರಿಸುತ್ತೇನೆ ಎಂದು ನಮೂದು ಇದೆ ಎಂದರೆ ಸರಿ. ಆ ಪ್ರಕಾರವಾಗಿ ನಾನು ಆರೋಪಿ 1 ರವರನ್ನು ಕರೆದುಕೊಂಡು ಹೋಗಿ ಘಟನಾ ಜಾಗದಲ್ಲಿ ಪಂಚನಾಮೆ ಮಾಡುವ ಅವಶ್ಯಕತೆ ಕಂಡು ಬರಲಿಲ್ಲ. ಪಿ.ಡಬ್ಲ್ಯೂ.ಡಿ ಇಲಾಖೆಯವರು ಮರಳನ್ನು ವಿಲೇವಾರಿ ಮಾಡಿದ ಕುರಿತು ನಮಗೆ ಯಾವುದೇ ಹಿಂಬರಹ ಮಾಡಿರುವುದಿಲ್ಲ. ಪಿ.ಡಬ್ಲ್ಯೂ.ಡಿ ಇಲಾಖೆಯವರಿಗೆ ಮರಳನ್ನು ವರ್ಗಾಯಿಸಲು ಟ್ರಾಕ್ಟರ್ ನ್ನು ತೆಗೆದುಕೊಂಡು ಹೋಗಲು ನಾನು ಯಾವ ಸಿಬ್ಬಂದಿಯನ್ನು ನೇಮಿಸಿದೆ ಎಂದು ನನಗೆ ನೆನಪಿಲ್ಲ. ನಾನು ಹಾಗೇ ನೇಮಿಸಿದ ಸಿಬ್ಬಂದಿಯ ಹೇಳಿಕೆಯನ್ನು ತೆಗೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ.

2. ನ್ಯಾಯಾಲಯದ ಆದೇಶದಂತೆ 2 ನೇ ಆರೋಪಿತನಿಗೆ ಯಾವ ಸ್ಥಳದಲ್ಲಿ ವಾಹನವನ್ನು ಬಿಡುಗಡೆ ಮಾಡಿದೇವು ಎಂದು ನನಗೆ ನೆನಪಿಲ್ಲ. ಆ ರೀತಿ ನ್ಯಾಯಾಲಯದ ಆದೇಶದಂತೆ

ಬಿಡುಗಡೆ ಮಾಡುವ ಪೂರ್ವದಲ್ಲಿ ಟ್ರಾಕ್ಟರ್ ನಮ್ಮ ವಶದಲ್ಲಿತ್ತು. ನಿಪಿ-4 ರಿಂದ 7 ಫೋಟೋ ನೋಡಿ ಗುರುತಿಸಿ, ನಿರ್ದಿಷ್ಟವಾದ ಸ್ಥಳ ನನಗೆ ಹೇಳಲಾಗುವುದಿಲ್ಲ. ಸದರಿ ಫೋಟೋಗಳಲ್ಲಿ ಟ್ರಾಕ್ಟರ್ ನಿಂತಿರುವ ಸ್ಥಳ 2 ನೇ ಆರೋಪಿಯ ಮನೆ ಹತ್ತಿರ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಆ ದಿನ ಯಾವುದೇ ಅಕ್ರಮ ಮರಳು ಸಾಗಾಟಣೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.ಟ್ರಾಕ್ಟರ್ ನಲ್ಲಿ ಯಾವುದೇ ಮರಳು ಇಲ್ಲದೇ ಇರುವ ಕಾರಣದಿಂದ ಪಿ.ಡಬ್ಲ್ಯೂ.ಡಿ ಇಲಾಖೆಯವರು ಮರಳು ವಿಲೇವಾರಿ ಮಾಡಿದ ಕುರಿತು ಯಾವುದೇ ಹಿಂಬರಹ ಮಾಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಠಾಣಾ ಮೇಲಾಧಿಕಾರಿ ಎಂದು ಸೂಚಿಸುವುದು ಸರಿ. ಸದರಿಯವರು ನಮ್ಮ ಠಾಣಾ ಅಂಕಿ ಅಂಶಗಳಿಗೋಸ್ಕರ ಒಂದು ಸುಳ್ಳು ಪಿರ್ಯಾದಿ ದಾಖಲಿಸಿ, ನನ್ನ ಮೂಲಕ ತನಿಖೆ ನಡೆಸಿ, ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸುವಂತೆ ಪ್ರಭಾರ ಬೀರಿದ್ದಾರೆ ಎಂದರೆ ಸರಿಯಲ್ಲ. ನನ್ನ ತನಿಖೆಯಿಂದ ಆರೋಪಿತರು ಯಾವುದೇ ಅಪರಾದ ಮಾಡಿಲ್ಲ ಎಂದು ಕಂಡು ಬಂದರೂ ಸಹ ಚಾಸಾ-1 ರವರ ಪ್ರಭಾವಕ್ಕೆ ಒಳಗಾಗಿ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.